**SC No. 264/2023**
**PW-20**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 264/2023**

| | | |
|---|---|---|
| ಸಾಕ್ಷಿದಾರರ ಹೆಸರು | ದಿವಾಕರ್ ಆರ್. | ಪ್ರಮಾಣ ವಚನ ಮಾಡಿದ ದಿನಾಂಕ: **18.02.2026** |
| ತಂದೆಯ/ಗಂಡನ ಹೆಸರು | ಲೇಟ್. ರಾಮಕೃಷ್ಣೇಗೌಡ | |
| ವಯಸ್ಸು | 45 ವರ್ಷ | |
| ವೃತ್ತಿ | ಪೊಲೀಸ್ ಇನ್ಸ್‌ಪೆಕ್ಟರ್ ಮಂಡಿ ಪೊಲೀಸ್ ಠಾಣೆ , ಮೈಸೂರು | ಪ್ರಾ.ಸಾಃ 20 |
| ವಾಸ ಸ್ಥಳ | ಮೈಸೂರು | ಚಾ.ಸಾಃ 38 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಡಿಸೆಂಬರ್ *2022* ರಿಂದ ಜೂನ್ *2025* ರವರೆಗೆ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ *15.07.2023* ರಂದು ಮಧ್ಯಾಹ್ನ *1.30* ಗಂಟೆ ಸಮಯದಲ್ಲಿ ನಾನು ಗಸ್ತಿನಲ್ಲಿ ಇದ್ದಾಗ ಕುಂಬಾರಕೊಪ್ಪಲಿನ ಮೃತೆಯ ವಾಸದ ಮನೆಯ ಬಳಿ ಗಲಾಟೆಯಾಗಿ ಆರೋಪಿ ಮಹದೇವನು ಮೃತೆಗೆ ಚಾಕುವಿನಿಂದ ಚುಚ್ಚಿದ ಬಗ್ಗೆ ವಿಷಯ ತಿಳಿದು ತಕ್ಷಣ ಘಟನಾ ಸ್ಥಳ ಕ್ಕೆ ಭೇಟಿ ನೀಡಿದ್ದು ಸ್ಥಳ ದಲ್ಲಿನ ಸಾಕ್ಷ್ಯ ಸಂಗ್ರಹಣೆಗೆ ಎ.ಎಸ್.ಐ ಜೋಸೆಫ್ ಮತ್ತು ಸಿ.ಹೆಚ್.ಸಿ *349* ಹರೀಶ್ ರವರನ್ನು ನೇಮಿಸಿ ನಂತರ ಗಾಯಾಳು ಆಸ್ಪತ್ರೆಯಲ್ಲಿ ಇರುವ ಬಗ್ಗೆ ವಿಚಾರ ತಿಳಿದು ಮೇಟಗಳ್ಳಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಲಾಗಿ ಗಾಯಾಳುವನ್ನು ಕೆ.ಆರ್. ಆಸ್ಪತ್ರೆಗೆ ಶಿಫ್ಟ್

ಮಾಡಿರುವ ಬಗ್ಗೆ ವಿಚಾರ ತಿಳಿದಿದ್ದು ನಂತರ ಅದೇ ದಿನ ಸಂಜೆ *5.10* ಗಂಟೆಗೆ ಕೆ.ಆರ್. ಆಸ್ಪತ್ರೆಯಿಂದ ಮೃತೆ ಹರ್ಷಿತಾಳ ಡೆತ್ ಮೆಮೊ ವನ್ನು ಸ್ವೀಕರಿಸಿದ್ದೆನು. ನಂತರ *5.15* ಗಂಟೆಗೆ ದೂರುದಾರರಾದ ಗೀತ ಕೋಂ ಲೋಕೇಶ್, *36* ವರ್ಷ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ *70/2023* ಕಲಂ *302* ಐಪಿಸಿ ರೀತ್ಯ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ.ವರದಿ ಮತ್ತು ದೂರನ್ನು ನ್ಯಾಯಾಲಯಕ್ಕೆ ಮತ್ತು ಸದರಿ ಪ್ರತಿಗಳನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೆನು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*1* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ.** *1(**ಬಿ**)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪ್ರ.ವ.ವ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.***42* ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ.***42 (ಎ)* ಎಂದು ಗುರುತಿಸಲಾಯಿತು.

ನಂತರ ಪ್ರಕರಣದ ಕೃತ್ಯ ಸ್ಥಳ ಮಹಜರ್ ಕ್ರಮ ಜರುಗಿಸಲು ಇಬ್ಬರು ಸರ್ಕಾರಿ ಪಂಚರನ್ನು ಕಳುಹಿಸಿಕೊಡಲು ವಲಯ ಆಯುಕ್ತರು ಕಛೇರಿ *5* ರವರಿಗೆ ಕೋರಿಕೆ ಪತ್ರ ಮತ್ತು ಕೃತ್ಯ ನಡೆದ ಸ್ಥಳ ಕ್ಕೆ ತಜ್ಞರನ್ನು ಕಳುಹಿಸುವಂತೆ ***FSL*** ಮತ್ತು ***finger print*** ವಿಭಾಗಕ್ಕೆ ಮನವಿ ಪತ್ರವನ್ನು ಸಲ್ಲಿಸಿಕೊಂಡಿದ್ದೆನು. ಸಾಕ್ಷಿದಾರರು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.** *43* ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ.***43(ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ***finger print*** ವಿಭಾಗಕ್ಕೆ ಕಳುಹಿಸಿದ್ದ ಮನವಿ ಪತ್ರ ವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.** *44* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.***44 (ಎ)* ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಸಂಜೆ ವಲಯ ಕಛೇರಿ *5* ರಿಂದ ಶಂಕರಪ್ಪ ಮತ್ತು ಸಹೀರ್ ಮೆಹದಿ ಎಂಬ ಸರ್ಕಾರಿ ನೌಕರರನ್ನು ಪಂಚರಾಗಿ ಕಳುಹಿಸಿಕೊಟ್ಟಿದ್ದು ಠಾಣೆಯಲ್ಲಿ ಬಂದು ನನ್ನ ಮುಂದೆ ಹಾಜರಾದವರಿಗೆ ಪ್ರಕರಣದ ವಿದ್ಯಾಮಾನಗಳನ್ನು ತಿಳಿಸಿ ದೂರುದಾರರನ್ನು ಪರಿಚಯ ಮಾಡಿಸಿಕೊಟ್ಟು ಅವರು ಗುರುತಿಸಿ ತೋರಿಸುವ ಕೃತ್ಯ ಸ್ಥಳ ಗಳ ಮತ್ತು ಸಿಗಬಹುದಾದ ಸಾಕ್ಷ್ಯವನ್ನು ಅಮಾನತ್ತು ಪಡಿಸಿಕೊಳ್ಳುವ ಸಲುವಾಗಿ ಪಂಚರಾಗಿ ಹಾಜರಾಗಬೇಕೆಂದು ಕೋರಿಕೊಂಡ ಮೇರೆಗೆ ಅವರು ಒಪ್ಪಿದ್ದು ಅವರಿಗೆ ಪೊಲೀಸ್ ನೊಟೀಸ್ ಜಾರಿ ಮಾಡಿದ್ದೆನು. ನಂತರ ಠಾಣೆಗೆ ಬೆರಳು ಮುದ್ರೆ ಅಧಿಕಾರಿ ಪಿ.ಎಸ್ಐ ಧನಲಕ್ಷ್ಮಿ ಮತ್ತು ***SOCO*** ಅಧಿಕಾರಿಗಳಾದ ಭಾರ್ಗವ್ ಮತ್ತು ಶುಭಾಶ್ ರವರು ಠಾಣೆಗೆ ಬಂದಿದ್ದು ಎಲ್ಲರೂ ಠಾಣೆಯಿಂದ ಇಲಾಖಾ ಜೀಪ್ ನಲ್ಲಿ ಮತ್ತು ಖಾಸಗಿ ವಾಹನದಲ್ಲಿ ದೂರುದಾರರು ತೋರಿಸಿದ ಮಾರ್ಗದಂತೆ ಕೆ.ಆರ್.ಎಸ್. ರಸ್ತೆ ಮೂಲಕ ಪಿರ್ಯಾದುದಾರರು ಮಾರಿಗುಡಿ ರಸ್ತೆಯಲ್ಲಿ ಕರೆದುಕೊಂಡು ಹೋಗಿದ್ದು ದೂರುದಾರರ ಮನೆಯ ಮುಂಭಾಗ ಎಲ್ಲರೂ ಕೃತ್ಯ ಸ್ಥಳ ದಲ್ಲಿ ಇಳಿದು ದೂರುದಾರರು ತೋರಿಸಿದ ಕೃತ್ಯ ಸ್ಥಳ ವನ್ನು ಪರಿಶೀಲಿಸಿ ಸದರಿ ಸ್ಥಳ ದಲ್ಲಿ ಬಿದ್ದಿದ್ದ ಒಂದು ರಕ್ತಸಿಕ್ತ ಚಾಕುವನ್ನು ದೂರುದಾರರು ಗುರುತಿಸಿ ತೋರಿಸಿದ್ದು ಇದೇ ಚಾಕುವಿನಿಂದ ನನ್ನ ಮಗಳಿಗೆ ಅಳಿಯ ಮಾದೇವ ಚುಚ್ಚಿ ಕೊಲೆ ಮಾಡಿದ್ದು ಎಂದು ತೋರಿಸಲಾಗಿ ***RFSL*** ಮತ್ತು ಬೆರಳು ಮುದ್ರೆ ಅಧಿಕಾರಿಗಳ ಸಮಕ್ಷಮ ಅದನ್ನು ಪರಿಶೀಲಿಸಿ ಸದರಿ ಚಾಕುವು *10* ಇಂಚು ಉದ್ದ ಇದ್ದು *1* ಭಾಗ ಹರಿತವಾಗಿದ್ದು ಇನ್ನೊಂದು ಭಾಗ ಹರಿತವಾಗಿರಲಿಲ್ಲ ಹಿಡಿಕೆಯೂ ಕಪ್ಪು ಬಣ್ಣದ ಪ್ಲಾಸ್ಟಿಕ್ ಹಿಡಿಕೆಯಾಗಿದ್ದು ಅದು ಸುಮಾರು *5* ಇಂಚು ಉದ್ದು ಚಾಕುವಿನ ಚೂಪಾದ ಭಾಗ *5* ಇಂಚು ಉದ್ದ ಇದ್ದು ಸ್ಟೀಲ್ ನಿಂದ ಮಾಡಲ್ಪಟ್ಟಿದ್ದು ಸದರಿ ಚಾಕುವಿನ ಮೇಲೆ ಯಾವುದಾದರು ಬೆರಳು ಮುದ್ರೆ ಇರುವ ಬಗ್ಗೆ ***finger print***

ಪಿ.ಎಸ್.ಐ ಧನಲಕ್ಷ್ಮಿ ರವರಿಂದ ಪರೀಕ್ಷಿಸಿ ನಂತರ ಚಾಕವನ್ನು ಸುರಕ್ಷಿತವಾಗಿ ಬಿಳಿ ಬಟ್ಟೆಯ ಚೀಲದ ಒಳಗೆ ಹಾಕಿ ಹೊಲೆದು ಎಸ್ ಎಂಬ ಇಂಗ್ಲೀಷ್ ಅಕ್ಷರದ ಸೀಲು ಹಾಕಿ ಅದರ ಮೇಲೆ ಪಂಚರು, ಪಿರ್ಯಾದುದಾರರು ಮತ್ತು ತನಿಖಾಧಿಕಾರಿಯವರ ಸಹಿ ಹಾಕಿದ ಚೀಟಿಯನ್ನು ಅಂಟಿಸಿ ಅದನ್ನು ***article*** *–1* ಎಂದು ಗುರುತಿಸಲಾಗಿತ್ತು. ನಂತರ ಸ್ಥಳ ದಲ್ಲಿ ಹಾಜರಿದ್ದ ***RFSL*** ನ ***scene of crime*** ಆಫೀಸರ್ಸ್ ಗಳು ದೂರುದಾರರು ಗುರುತಿಸಿ ತೋರಿಸಿದ್ದ ರಕ್ತದ ಕಲೆಗಳು ಇದ್ದ ಒಟ್ಟು *6* ಜಾಗಗಳಲ್ಲಿ ರಕ್ತದ ಕಲೆಗಳು ಇದ್ದ ಜಾಗದಲ್ಲಿ ಸಂಗ್ರಹಿಸಿ ಜೊತೆಗೆ ಒಂದು ಕಂಟ್ರೋಲ್ ಸ್ವಾಬ್ ಮಾದರಿಯನ್ನು ಇನವಲಬ್ ಕವರ್ ಗಳಲ್ಲಿ ಪ್ರತ್ಯೇಕವಾಗಿ ಹಾಕಿ ನೀಡಿದ ಒಟ್ಟು *6* ವಸ್ತುಗಳನ್ನು ಇನವಲಬ್ ಕವರ್ ಅನ್ನು ಗಮ್ ನಿಂದ ಭದ್ರಪಡಿಸಿ ಎಸ್. ಎಂಬ ಇಂಗ್ಲೀಷ್ ಅಕ್ಷರದ ಸೀಲನ್ನು ಹಾಕಿ ಸದರಿ ವಸ್ತುಗಳಿಗೆ ಕ್ರಮಸಂಖ್ಯೆ *2* ರಿಂದ *7* ರವರೆಗೆ ವಸ್ತು ಸಂಖ್ಯೆ ನೀಡಿ ಪಂಚರು, ದೂರುದಾರರು ಮತ್ತು ತನಿಖಾಧಿಕಾರಿಯವರ ಸಹಿ ಉಳ್ಳ ಚೀಟಿಯನ್ನು ಅಂಟಿಸಿ ವಶಪಡಿಸಿಕೊಂಡಿದ್ದೆನು. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಚಾಕು, ***blood stained swab*** ಮತ್ತು ***control swab*** ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಗಲೇ ಎಂ.ಒ*–1* ರಿಂದ *7* ಎಂದು ಗುರುತಿಸಲಾಯಿತು. ಸದರಿ ಮಹಜರ್ ಅನ್ನು ಸಂಜೆ *5.45* ಗಂಟೆಯಿಂದ *6.45* ಗಂಟೆಯವರೆಗೆ ಠಾಣಾ ಸಿಬ್ಬಂದಿ ಸಿಪಿಸಿ *920* ಶ್ರೀಶೈಲಾ ಹುಗ್ಗಿ ರವರ ಕೈಬರವಣಿಗೆಯಲ್ಲಿ ಬರೆಯಿಸಿ ನಂತರ ಖಾಸಗಿ ಪೋಟೋಗ್ರಾಫರ್ ನಾಗೇಶ್ ರವರಿಂದ ಮಹಜರ್ ಸಮಯದಲ್ಲಿ ಪೋಟೋಗಳನ್ನು ತೆಗೆಸಿದ್ದೆನು. ಸಾಕ್ಷಿದಾರರು ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ– *3* ರಿಂದ *7* ಎಂದು ಗುರುತಿಸಲ್ಪಟ್ಟಿರುತ್ತವೆ. ಸದರಿ ಮಹಜರ್ ಸಮಯದಲ್ಲಿ ವಶಪಡಿಸಿಕೊಂಡಿದ್ದ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ

*58/23* ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿದಾರರು ಮಹಜರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*2* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ**. *2 (**ಸಿ**)* ಎಂದು ಗುರುತಿಸಲಾಯಿತು.

ನಂತರ ಪ್ರಕರಣದ ಆರೋಪಿ ಮಹದೇವನನ್ನು ಠಾಣಾ ಪಿ.ಎಸ್.ಐ ಶಬರೀಶ್ ಮತ್ತು ಸಿಬ್ಬಂದಿಗಳು ಹಾಜರುಪಡಿಸಿದ್ದು ಪ್ರಕರಣದ ಬಗ್ಗೆ ಆತನನ್ನು ವಿಚಾರಣೆ ಮಾಡಿ ತಪ್ಪನ್ನು ಒಪ್ಪಿಕೊಂಡ ಮೇರೆಗೆ ರಾತ್ರಿ *7.45* ಗಂಟೆಗೆ ದಸ್ತಗಿರಿ ಕ್ರಮ ಜರುಗಿಸಿ ಆರೋಪಿತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ವಿಚಾರಣಾ ಸಮಯದಲ್ಲಿ ಆರೋಪಿಯೂ ಕೃತ್ಯ ಕ್ಕೆ ಬಳಸಿದ್ದ ಚಾಕುವನ್ನು ತಂದಿದ್ದ ಒಂದು ಬ್ಯಾಗ್ ಅನ್ನು ತೋರಿಸಿದ್ದು ಸದರಿ ಬ್ಯಾಗ್ ಅನ್ನು ಪರಿಶೀಲಿಸಿ ನೋಡಲಾಗಿ ಅದು ***liver pool*** ಎನ್ನುವ ಬ್ಯಾಗ್ ಆಗಿದ್ದು ಬ್ಯಾಗನಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಆಗಿದ್ದು ಮತ್ತು ಬ್ಯಾಗ್ ನಲ್ಲಿನ ಬಿಳಿ ಬಣ್ಣದ ತುಂಬು ತೋಳಿನ ಶರ್ಟುಗಳನ್ನು ತೋರಿಸಿದ್ದು ಅವುಗಳನ್ನು ತನಿಖೆ ಸಲುವಾಗಿ ವಶಕ್ಕೆ ಪಡೆಯಬೇಕಾದ ಕಾರಣ ಪಂಚರಾದ ಚಂದ್ರಶೇಖರ್ ಮತ್ತು ಮಹೇಶ್ ರವರನ್ನು ಬರಮಾಡಿಕೊಂಡು ಪ್ರಕರಣದ ವಿದ್ಯಾಮಾನಗಳನ್ನು ತಿಳಿಸಿ ಸದರಿ ಬ್ಯಾಗ್ ಮತ್ತು ಬಟ್ಟೆಗಳನ್ನು ವಶ ಪಡಿಸಿಕೊಳ್ಳುವ ಸಮಯದಲ್ಲಿ ಪಂಚರಾಗಿ ಇರಲು ಕೋರಿಕೊಂಡು ಅವರಿಗೆ ನೊಟೀಸ್ ಅನ್ನು ನೀಡಿದ್ದೆನು. ಸಾಕ್ಷಿದಾರರು ಪೊಲೀಸ್ ನೋಟಿಸ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*12* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ**.*12 (**ಬಿ**)* ಎಂದು ಗುರುತಿಸಲಾಯಿತು. ಅವರ ಸಮಕ್ಷಮ ಪಂಚನಾಮೆ ಯನ್ನು ಜರುಗಿಸಿ ಸದರಿ ಬ್ಯಾಗ್ ಮತ್ತು ಬಟ್ಟೆಯನ್ನು ವಶಕ್ಕೆ ಪಡೆದು ಅವುಗಳನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಎಸ್ ಎಂಬ ಇಂಗ್ಲೀಷ್ ಅಕ್ಷರದ ಸೀಲನ್ನು ಹಾಕಿ ಪಂಚರು, ತನಿಖಾಧಿಕಾರಿಯವರು ಸಹಿ ಮಾಡಿದ ಚೀಟಿಯನ್ನು

ಅಂಟಿಸಿದ್ದೆನು. ಸದರಿ ವಸ್ತುಗಳಿಗೆ ವಸ್ತು ಸಂಖ್ಯೆ *–1* ಮತ್ತು *2* ಎಂದು ನೀಡಿ ಸದರಿ ಮಹಜರ್ ಅನ್ನು ರಾತ್ರಿ *9.45* ಗಂಟೆಯಿಂದ ರಾತ್ರಿ *10.15* ರ ವರೆಗೆ ಠಾಣಾ ಸಿಬ್ಬಂದಿ ಸಿಪಿಸಿ *920* ಶೀಶೈಲ ಹುಗ್ಗಿ ರವರ ಮೂಲಕ ಇಲಾಖಾ ಲ್ಯಾಪ್ ಟಾಪ್ ನಲ್ಲಿ ಮಹಜರ್ ಜರುಗಿಸಿದ್ದೆನು. ನಂತರ ಸದರಿ ವಸ್ತುಗಳನ್ನು ಮಾಲುಪಟ್ಟಿ ಸಂಖ್ಯೆ *59/23* ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಸಾಕ್ಷಿದಾರರು ಮಹಜರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*10* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ.** *10* **(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಬ್ಯಾಗ್ ಮತ್ತು ಶರ್ಟು ಬಟ್ಟೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ–*12* ಮತ್ತು *13* ಎಂದು ಗುರುತಿಸಲ್ಪಟ್ಟಿರುತ್ತವೆ. ಸಾಕ್ಷಿದಾರರು ಆರೋಪಿತನ ಸ್ವ ಇಚ್ಚಾ ಹೇಳಿಕೆಯನ್ನು ನೋಡಿ ಗುರುತಿಸಿದದು ಅದನ್ನು **ನಿಪಿ– 45** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ–*45(ಎ)* ಎಂದು ಗುರುತಿಸಲಾಯಿತು. ಆರೋಪಿತನು ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ ದಿನಾಂಕ *15.07.2023* ರಂದು ಬೆಳಗ್ಗೆ ಕೇರಳಾದಿಂದ ಹೊರಟಾಗ ತನ್ನ ಬಳಿ ಈ ಬ್ಯಾಗ್ ಅನ್ನು ಮತ್ತು ಬ್ಯಾಗ್ ನಲ್ಲಿ ಕೃತ್ಯಕ್ಕೆ ಬಳಸಿದ್ದ ಚಾಕುವನ್ನು ಮತ್ತು ಒಂದು ಶರ್ಟ್ ಅನ್ನು ತೆಗೆದುಕೊಂಡು ಬಂದಿದ್ದೆ ಎಂದು ತಿಳಿಸಿದ್ದು ಅದರಂತೆ ಸದರಿ ಬ್ಯಾಗ್ ಮತ್ತು ಶರ್ಟ್ ಅನ್ನು ಆರೋಪಿ ಸಮ್ಮುಖ ಅಮಾನತ್ತುಪಡಿಸಿಕೊಂಡಿದ್ದೆನು.

ನಂತರ ಅದೇ ದಿನ ಸಾಕ್ಷಿದಾರರಾದ ಮಹೇಶ್ ಮತ್ತು ಚಂದ್ರಶೇಖರ್ ರವರ ಹೇಳಿಕೆ ದಾಖಲು ಮಾಡಿಕೊಂಡಿದ್ದೆನು. ಚಂದ್ರಶೇಖರ್ ಮತ್ತು ಮಹೇಶ್ ರವರು ನಿಪಿ–*11* ಮತ್ತು ನಿಪಿ–*13* ರಂತೆ ನನ್ನ ಮುಂದೆ ಹೇಳಿಕೆ ನೀಡಿದ್ದರು. ನಂತರ ಅದೇ ದಿನ ಸಾಕ್ಷಿದಾರರಾದ

ಶಂಕರಪ್ಪ, ಸಹೀರ್ ಮೆಹದಿ ಮತ್ತು ಫೋಟೋಗ್ರಾಫರ್ ನಾಗೇಶ್ ರವರ ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು.

ನಂತರ ದಿನಾಂಕ *16.07.2023* ರಂದು ಪ್ರಕರಣದಲ್ಲಿ ಮೃತೆ ಹರ್ಷಿತ ಮದುವೆಯಾಗಿ *1* ವರ್ಷ *4* ತಿಂಗಳು ಆಗಿದ್ದ ಕಾರಣ ಶವ ಪಂಚನಾಮೆ ಜರುಗಿಸಿ ವರದಿ ನೀಡಲು ತಹಶೀಲ್ದಾರ್ ಮೈಸೂರು ರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿಕೊಂಡಿದ್ದೆನು. ಸಾಕ್ಷಿದಾರರು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*41* ಎಂದು ಗುರುತಿಸಲ್ಪಟ್ಟಿದ್ದು , ಸಾಕ್ಷಿದಾರರ ಸಹಿಯನ್ನು **ನಿಪಿ.*41(ಬಿ )*** ಎಂದು ಗುರುತಿಸಲಾಯಿತು. ಹೆಚ್ಚುವರಿ ತಹಶೀಲ್ದಾರ್ ರಾದ ಎನ್. ವಿಶ್ವನಾಥ್ ರವರು ದಿನಾಂಕ *16.07.2023* ರಂದು ಬೆಳಗ್ಗೆ *10.00* ಗಂಟೆಯಿಂದ ಮಧ್ಯಾಹ್ನ *12.30* ರ ನಡುವೆ ಸರ್ಕಾರಿ ಮೆಡಿಕಲ್ ಕಾಲೇಜಿನ ಶವಗಾರದಲ್ಲಿ ಪಂಚರಾದ ಹರೀಶ್ ಬಿನ್ ವೆಂಕಟಶೆಟ್ಟಿ, ಕುಮಾರ್ ಬಿನ್ ಮಹದೇವಶೆಟ್ಟಿ, ಶಾರದ ಕೋಂ ಶಿವಣ್ಣೇಗೌಡ ರವರ ಸಮಕ್ಷಮ ಠಾಣಾ ಸಿಬ್ಬಂದಿ ***WPC*** *244* ಚಾಂದಿನಿ ರವರ ಸಮಕ್ಷಮ ಶವ ಪಂಚನಾಮೆಯನ್ನು ಜರುಗಿದ್ದರು. ನಾನು ಆ ವೇಳೆಯಲ್ಲಿ ಹಾಜರಿದ್ದೆನು. ಸದರಿ ಶವ ಪಂಚನಾಮೆಯ ಸಮಯದಲ್ಲಿ ಖಾಸಗಿ ಫೋಟೋಗ್ರಾಫರ್ ಅಭಿ ರವರಿಂದ ಫೋಟೋಗಳನ್ನು ತೆಗೆಸಿದ್ದೆನು. ಸಾಕ್ಷಿದಾರರು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ*-8, 9,* ನಿಪಿ*-20* ರಿಂದ *26* ಎಂದು ಗುರುತಿಸಲ್ಪಟ್ಟಿರುತ್ತವೆ.

ನಂತರ ಅದೇ ದಿನ ಪ್ರಕರಣದ ಆರೋಪಿಗೆ ವೈದ್ಯಕೀಯ ಪರೀಕ್ಷೆ ಮಾಡಿಸಿದ್ದು ಆರೋಪಿಯ ಮೈಮೇಲೆ ಇದ್ದ ರಕ್ತದ ಕಲೆಗಳು ಆಗಿದ್ದ ಬಟ್ಟೆಗಳನ್ನು ಮತ್ತು ಆರೋಪಿತನ ಕೈಬೆರಳಿನ ಸಂದಿಗಳಲ್ಲಿ ಇರಬಹುದಾದ ಜೈವಿಕ ಅಂಶಗಳನ್ನು ಸಂಗ್ರಹಿಸಿ ಕೊಡಲು ಕೋರಿ

ಪ್ರಾಧ್ಯಾಪಕರು, ನ್ಯಾಯಶಾಸ್ತ್ರ ವಿಭಾಗ ಸರ್ಕಾರಿ ಮೆಡಿಕಲ್ ಕಾಲೇಜು ರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿ ಆರೋಪಿತನನ್ನು ಅವರ ಮುಂದೆ ಹಾಜರು ಪಡಿಸಿದ್ದೆನು. ಸಾಕ್ಷಿದಾರರು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.** *46* ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ.** *46 (***ಎ***)* ಎಂದು ಗುರುತಿಸಲಾಯಿತು. ನಂತರ ಆರೋಪಿತನಿಗೆ ಕೆ.ಆರ್. ಆಸ್ಪತ್ರೆಯ ವೈದಾಧಿಕಾರಿಯಿಂದ ಆತನ ರಕ್ತದ ಗುಂಪಿನ ಮಾದರಿಯನ್ನು ಸಂಗ್ರಹಿಸಿ ಕೊಡಲು ಕೋರಿಕೆ ಪತ್ರವನ್ನು ಸಲ್ಲಿಸಿ ಆರೋಪಿತನನ್ನು ಹಾಜರುಪಡಿಸಿ ಪರೀಕ್ಷೆಗೆ ಒಳಪಡಿಸಿದ್ದೆನು. ಸಾಕ್ಷಿದಾರರು ಕೋರಿಕೆ ಪತ್ರ ಮತ್ತು ಆಸ್ಪತ್ರೆಯ *4* ದಾಖಲೆಗಳನ್ನು ನೋಡಿ ಗುರುತಿಸಿದ್ದು, ಕೋರಿಕೆ ಪತ್ರವನ್ನು **ನಿಪಿ.***47* ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ.***47(***ಎ***)* ಎಂದು ಗುರುತಿಸಲಾಯಿತು. ವೈದ್ಯಕೀಯ *4* ದಾಖಲೆಗಳನ್ನು ಒಟ್ಟಾಗಿ **ನಿಪಿ**-*48* ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ**-*48(***ಎ***)* ಎಂದು ಗುರುತಿಸಲಾಯಿತು.

ನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದೆನು. ಅದೇ ದಿನ ಫೋಟೋಗ್ರಾಫರ್ ಅಭಿ ರವರನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ದಾಖಲು ಮಾಡಿಕೊಂಡಿದ್ದೆನು ಮತ್ತು ಅವರಿಂದ *65*-ಬಿ ದೃಡೀಕರಣ ಪತ್ರವನ್ನು ಪಡೆದುಕೊಂಡಿದ್ದೆನು. ಸಾಕ್ಷಿದಾರರು *65*-ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. *28* ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು **ನಿಪಿ.***28 (***ಬಿ***)* ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪ್ರಕರಣದ ಗಾಯಾಳು ಗೀತಾ ರವರಿಗೆ ಸಂಬಂಧಿಸಿದ ಎಂ.ಎಲ್.ಸಿ ಪ್ರತಿಯನ್ನು ಜಿಲ್ಲಾ ಆಸ್ಪತ್ರೆ ಮೇಟಗಳ್ಳಿ ಯಿಂದ ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಮೃತ ಹರ್ಷಿತಾಳ ಡೆತ್ ಇಂಟಿಮೇಶನ್ ಅನ್ನು ನೋಡಿ

ಗುರುತಿಸಿದ್ದು, ಅದನ್ನು ನಿಪಿ. *49* ಎಂದು , ಸಾಕ್ಷಿದಾರರ ಸಹಿಯನ್ನು ನಿಪಿ. *49 (ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮೃತ ಹರ್ಷಿತಾಳ ಎಂ.ಎಲ್.ಸಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-*50* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*50(ಎ)* ಎಂದು ಗುರುತಿಸಲಾಯಿತು. ಆರೋಪಿತನ ಎಂ.ಎಲ್.ಸಿ ನೋಡಿ ಗುರುತಿಸಿದ್ದು ಅದನ್ನು ನಿಪಿ-*51* ಎಂದು ಗುರುತಿಸಲಾಯಿತು. ಗಾಯಾಳು ಗೀತಾ ರವರ ಎಂ.ಎಲ್.ಸಿ ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*52* ಎಂದು ಗುರುತಿಸಲಾಯಿತು.

ನಂತರ ವೈದಾಧಿಕಾರಿಯಾದ ಆನಂದ ರಾಯಮನೆ ರವರಿಂದ ಮೃತೆ ಹರ್ಷಿತಾ ರವರ ಮರೋಣೋತ್ತರ ಪರೀಕ್ಷೆ ವರದಿಯನ್ನು ಸ್ವೀಕರಿಸಿದ್ದು ಅದರಲ್ಲಿ ***FSL*** ವರದಿ ನಂತರ ಅಂತಿಮ ಅಭಿಪ್ರಾಯವನ್ನು ನೀಡುವುದಾಗಿ ನಮೂದಿಸಿ ಕಳುಹಿಸಿದ್ದು ಅದನ್ನು ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಶವ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*33* ಎಂದು ಗುರುತಿಸಲ್ಪಟ್ಟಿರುತ್ತದೆ.

ದಿನಾಂಕ *18.07.2023* ರಂದು ಪ್ರಕರಣದ ಸಾಕ್ಷಿದಾರರಾದ ಸಂಗೀತ ರವರ ವಿಚಾರಣೆ ಮಾಡಿ ಹೇಳಿಕೆ ದಾಖಲು ಮಾಡಿಕೊಂಡಿದ್ದೆನು. ಸದರಿಯವರು ನನ್ನ ಮುಂದೆ ನಿಪಿ-*29* ರಂತೆ ಹೇಳಿಕೆಯನ್ನು ಕೊಟ್ಟಿದ್ದರು.

ನಂತರ ದಿನಾಂಕ *22.07.2023* ರಂದು ಸಾಕ್ಷಿದಾರರಾದ ನಾಗರಾಜು, ಭವ್ಯ, ರಶ್ಮಿ ಅಭಿಮನ್ಯು ರವರ ವಿಚಾರಣೆ ಮಾಡಿ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದ್ದೆನು. ಭವ್ಯ ನಿಪಿ-*19* ರಂತೆ, ನಾಗರಾಜು ರವರು ನಿಪಿ-*31* ರಂತೆ ನನ್ನ ಮುಂದೆ ಹೇಳಿಕೆಗಳನ್ನು ಕೊಟ್ಟಿದ್ದರು.

ದಿನಾಂಕ *25.07.2023* ರಂದು ಹೆಚ್ಚುವರಿ ತಹಶೀಲ್ದಾರ್ ವಿಶ್ವನಾಥ್ ರವರಿಂದ ಮೃತೆ

ಹರ್ಷಿತಾಳ ಶವ ಪಂಚನಾಮೆ ವರದಿಯನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಶವ ಪಂಚನಾಮೆ ಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. *32* ಎಂದು ಗುರುತಿಸಲ್ಪಟ್ಟಿರುತ್ತದೆ. ಸಾಕ್ಷಿದಾರರು ಕವರಿಂಗ್ ಲೆಟರ್ ಅನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಜೆರಾಕ್ಸ್ ದಾಖಲೆ ಇದ್ದು ಆರೋಪಿ ಪರ ವಕೀಲರು ಸದರಿ ದಾಖಲೆಯನ್ನು ನಿಶಾನೆಯಾಗಿ ಒಳಪಡಿಸಲು ತಕರಾರು ಇರುವುದಿಲ್ಲ ಎಂದು ಹೇಳಿದ್ದರಿಂದ ಸದರಿ ದಾಖಲೆಯನ್ನು ನಿಪಿ-*53* ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಕೃತ್ಯ ನಡೆದ ಸ್ಥಳ ದ ನಕ್ಷೆ ತಯಾರಿಸಿ ಕೊಡಲು ವಲಯ ಕಛೇರಿ *5* ರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿದಾರರು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*54* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. *54(*ಎ*)* ಎಂದು ಗುರುತಿಸಲಾಯಿತು.

ನಂತರ ದಿನಾಂಕ *26.07.2023* ರಂದು ಮೃತೆ ಹರ್ಷಿತಾ ರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ವೈದ್ಯಕೀಯ ದಾಖಲಾತಿಗಳ ವಿವರಗಳನ್ನು ಕೋರಿ ಮೇಟಗಳ್ಳಿ ಜಿಲ್ಲಾ ಆಸ್ಪತ್ರೆಯ ವೈಧ್ಯಾಧಿಕಾರಿಯವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿ ಕೊಂಡಿದ್ದೆನು. ಸಾಕ್ಷಿದಾರರು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.** *55* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.***55* **(ಎ)** ಎಂದು ಗುರುತಿಸಲಾಯಿತು.

ದಿನಾಂಕ *30.07.2023* ರಂದು ಸಾಕ್ಷಿದಾರರಾದ ಮಹದೇವಮ್ಮ ರವರ ವಿಚಾರಣೆ ಮಾಡಿ ಅವರ ಹೇಳಿಕೆ ಯನ್ನು ದಾಖಲು ಮಾಡಿಕೊಂಡಿದ್ದೆನು. ಅವರು ನನ್ನ ಸಮಕ್ಷಮ ನಿಪಿ-*38* ರಂತೆ ಹೇಳಿಕೆಯನ್ನು ಕೊಟ್ಟಿದ್ದರು.

ನಂತರ ದಿನಾಂಕ *08.08.2023* ರಂದು ಮೃತೆ ಹರ್ಷಿತಾಳ ಮರಣೋತ್ತರ ಪರೀಕ್ಷೆ ಸಮಯದಲ್ಲಿ ವೈದ್ಯರು ಸಂಗ್ರಹಿಸಿದ್ದ *10* ವಿವಿಧ ಭಾಂಗಿಗಳನ್ನು ಠಾಣಾ ಸಿಬ್ಬಂದಿ ಸಿಪಿಸಿ *765* ನಾಗರಾಜು ರವರು ಪಡೆದು ಠಾಣೆಗೆ ಹಾಜರುಪಡಿಸಿದ್ದು ಅವುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ *73/23* ರಂತೆ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಅದೇ ದಿನ ಪ್ರಕರಣದ ಗಾಯಾಳು ಮತ್ತು ದೂರುದಾರರಾದ ಗೀತಾ ರವರಿಗೆ ವೈದ್ಯಕೀಯ ಚಿಕಿತ್ಸೆ ನೀಡಿದ ಬಗ್ಗೆ ದಾಖಲಾತಿಗಳನ್ನು ದೃಡೀಕರಿಸಿ ಕೊಡಲು ಕೋರಿ ವೈಧ್ಯಾಧಿಕಾರಿಗಳು ಜಿಲ್ಲಾ ಆಸ್ಪತ್ರೆ ಮೇಟಗಳ್ಳಿ ರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿದ್ದೆನು.

ನಂತರ ದಿನಾಂಕ *12.08.2023* ರಂದು ಆರೋಪಿ ಮಹದೇವನಿಗೆ ಸರ್ಕಾರಿ ಮೆಡಿಕಲ್ ಕಾಲೇಜಿನ ವೈದ್ಯರು ದಿನಾಂಕ *16.07.2023* ರಂದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸಂಗ್ರಹಿಸಿಕೊಟ್ಟ ಬಟ್ಟೆಗಳು ಮತ್ತು ಇತರೆ ಭಾಂಗಿಗಳನ್ನು ಒಟ್ಟು *7* ಸ್ವತ್ತಗಳನ್ನು ಠಾಣಾ ಸಿಬ್ಬಂದಿ ಹೆಚ್.ಸಿ *325* ಮಧುಸೂದನ್ ರವರು ಸಂಗ್ರಹಿಸಿ ಠಾಣೆಯಲ್ಲಿ ಹಾಜರುಪಡಿಸಿದ್ದನ್ನು ಸ್ವೀಕರಿಸಿ ಠಾಣಾ ಮಾಲು ಪಟ್ಟಿ ಸಂಖ್ಯೆ *74/2023* ರಂತೆ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಾನು ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

*( ಸಾಕ್ಷಿದಾರರಿಗೆ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)*

ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ blue and red colour full sleeve shirt, Blue and red sleeves baniyan, blue jeans pant, black and grey shorts, blue and grey underwear, Nail scrapings from left

fingers, nail scrapings from right fingers ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ **ಎಂ.ಒ–*14* ರಿಂದ** *20* ಎಂದು ಗುರುತಿಸಲಾಯಿತು.

ನಂತರ ದಿನಾಂಕ *18.08.2023* ರಂದು ಪ್ರಕರಣದ ಸಾಕ್ಷಿದಾರರಾದ ರಶ್ಮಿ, ನಾಗರಾಜು, ಅಭಿಮನ್ಯು ರವರನ್ನು *11* ನೇ ಅಪರ ಸಿವಿಲ್ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಕಲಂ *164* ಸಿ.ಆರ್.ಪಿ.ಸಿ ರೀತ್ಯ ಹೇಳಿಕೆಗಳನ್ನು ದಾಖಲು ಮಾಡಿ ಹೇಳಿಕೆ ಪ್ರತಿಗಳನ್ನು ಪಡೆದು ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಅಭಿಮನ್ಯು, ರಶ್ಮಿ ಮತ್ತು ನಾಗರಾಜು ರವರ ಕಲಂ *164* ಹೇಳಿಕೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.*15, 18* ಮತ್ತು *30* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.*15(ಬಿ), 18(ಬಿ), 30(ಬಿ)* ಎಂದು ಗುರುತಿಸಲಾಯಿತು. ನಂತರ ಅದೇ ದಿನ ಸಾಕ್ಷಿದಾರರಾದ ಸಂತೋಷ್ ರವರ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದೆನು.

ದಿನಾಂಕ *20.08.2023* ರಂದು ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ಠಾಣಾ ಮಾಲು ಪಟ್ಟಿ ಸಂಖ್ಯೆ *58/2023, 59/2023, 74/2023* ರಲ್ಲಿ ಕಂಡ ವಸ್ತುಗಳನ್ನು ರಸಾಯನಿಕ ಪರೀಕ್ಷೆ ಸಲುವಾಗಿ ***FSL*** ಬೆಂಗಳೂರಿಗೆ ಸಿಬ್ಬಂದಿ ಸಿಪಿಸಿ ***858*** ಚೇತನ್ ಕುಮಾರ್ ನಾಯ್ಕ್ ರವರ ಮೂಲಕ ರಹದಾರಿ ಪತ್ರದೊಂದಿಗೆ ಕಳುಹಿಸಿಕೊಟ್ಟಿದ್ದೆನು. ಸಾಕ್ಷಿದಾರರು ರಹದಾರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ**–*56* ಎಂದು, ಸಾಕ್ಷಿದಾರರು ಸಹಿಯನ್ನು **ನಿಪಿ**–*56(ಎ)* ಎಂದು ಗುರುತಿಸಲಾಯಿತು.

ದಿನಾಂಕ *22.08.2023* ರಂದು ಸಿಬ್ಬಂದಿ ಚೇತನ್ ಕುಮಾರ್ ನಾಯ್ಕ ರವರು ***FSL*** ಗೆ ಪರೀಕ್ಷೆಗೆ ನೀಡಿ ಸ್ವೀಕೃತಿ ಪಡೆದು ಠಾಣೆಗೆ ಹಾಜರುಪಡಿಸಿದ್ದರು. ಸಾಕ್ಷಿದಾರರು ಸ್ವೀಕೃತಿಯನ್ನು

ನೋಡಿ ಗುರುತಿಸಿದ್ದು, ಅದನ್ನು **ನಿಪಿ.***57* ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಠಾಣಾ ಸಿಬ್ಬಂದಿ ಸಿಹೆಚ್ ಸಿ *118* ರವರ ಮೂಲಕ ***RFSL*** ಮೈಸೂರಿಗೆ ಉಳಿದ ಭಾಂಗಿಗಳನ್ನು ಪರೀಕ್ಷೆ ಸಲುವಾಗಿ ರಹದಾರಿ ಪತ್ರದೊಂದಿಗೆ ಕಳುಹಿಸಿಕೊಟ್ಟಿದ್ದೆನು ಸದರಿಯವರು ಅದೇ ದಿನ ***RFSL*** ಸ್ವೀಕೃತಿಯನ್ನು ಹಾಜರುಪಡಿಸಿದ್ದು ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ರಹದಾರಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.***58* ಎಂದು , ಸಾಕ್ಷಿದಾರರ ಸಹಿಯನ್ನು **ನಿಪಿ.***58(ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸ್ವೀಕೃತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ*–59* ಎಂದು ಗುರುತಿಸಲಾಯಿತು.

ದಿನಾಂಕ *26.08.2023* ರಂದು ಸಾಕ್ಷಿದಾರರಾದ ಬಾಬು, ರತ್ನಮ್ಮ ರವರ ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು.

ದಿನಾಂಕ *02.09.2023* ರಂದು ಸಾಕ್ಷಿದಾರರಾದ ಬಸವಶೆಟ್ಟಿ, ಲೋಕೇಶ್, ಸೋಮೇಶ್ ರವರ ವಿಚಾರಣೆ ಮಾಡಿ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದ್ದೆನು. ಲೊಕೇಶ್ ರವರು ನನ್ನ ಮುಂದೆ ನಿಪಿ*–39* ರಂತೆ ಹೇಳಿಕೆ ಕೊಟ್ಟಿದ್ದರು.

ದಿನಾಂಕ *04.09.2023* ರಂದು ಜಿಲ್ಲಾ ಆಸ್ಪತ್ರೆ ಮೇಟಗಳ್ಳಿ ವೈದ್ಯರಿಂದ ಗೀತಾ ರವರಿಗೆ ಸಂಬಂಧಪಟ್ಟ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. *40* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.*40(ಬಿ)* ಎಂದು ಗುರುತಿಸಲಾಯಿತು. ಅದೇ ದಿನ ***RFSL*** ಮೈಸೂರು ರವರು ಮೃತೆ ಹರ್ಷಿತಾಳಿಗೆ ಸಂಬಂಧಪಟ್ಟ

ವಸ್ತುಗಳನ್ನು ಪರೀಕ್ಷಿಸಿ ಸಲ್ಲಿಸಿದ ವರದಿಯನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ***RFSL*** ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.***60* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.** *60 (ಎ)* ಎಂದು ಗುರುತಿಸಲಾಯಿತು.

ದಿನಾಂಕ *06.09.2023* ರಂದು ಸಾಕ್ಷಿದಾರರಾದ ಮಹೇಶ್, ಸುನೀತ ರವರ ವಿಚಾರಣೆ ಮಾಡಿ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದ್ದೆನು.

ದಿನಾಂಕ *07.09.2023* ರಂದು ಸಾಕ್ಷಿದಾರರಾದ ಸಂತೋಷ್ ರವರನ್ನು *10* ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ದಂಡ ಪ್ರಕ್ರಿಯಾ ಸಂಹಿತೆ ಕಲಂ *164* ರ ಪ್ರಕಾರ ಹೇಳಿಕೆ ದಾಖಲು ಮಾಡಿ ಹೇಳಿಕೆ ಪ್ರತಿಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಸಂತೋಷ್ ರವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-*14* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ-*14(ಬಿ)* ಎಂದು ಗುರುತಿಸಲಾಯಿತು.

ದಿನಾಂಕ *14.09.2023* ರಂದು ವಲಯ ಆಯುಕ್ತರು ಕಛೇರಿ *5* ರಿಂದ ಕೃತ್ಯ ನಡೆದ ಸ್ಥಳ ದ ನಕಾಶೆಯನ್ನು ಸ್ವೀಕೃಸಿ ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*37* ಎಂದು ಗುರುತಿಸಲ್ಪಟ್ಟಿರುತ್ತದೆ.

ದಿನಾಂಕ *21.09.2023* ರಂದು ಸಾಕ್ಷಿದಾರರಾದ ಅಶ್ವಿನಿ ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದೆನು. ನಂತರ ಸಾಕ್ಷಿದಾರರ ಹೇಳಿಕೆಗಳ ಆಧಾರದ ಮೇಲೆ ಆರೋಪಿತನ ಮೇಲೆ ಆರೋಪ ದೃಡ ಪಟ್ಟ ಮೇರೆಗೆ ಆರೋಪಿತನ ವಿರುದ್ದವಾಗಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದೆನು.

**( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**